# ಭಾಗ 2:
# ನರಾವತಾರದ ನಂತರದ ಆತನ ದೈವತ್ವವು

ದೇವರ ಕುಮಾರನು ತಂದೆಯಾದ ದೇವರ ಜ್ಞಾನದಂತೆ ಹಾಗೂ ಬಲದಂತೆ ತೋರಿಸಲ್ಪಟ್ಟದ್ದನ್ನು ನಾವು ನೋಡಿದ್ದೇವೆ. ನಮ್ಮ ಅದ್ಭುತಕರವಾದ ಜಗತ್ತು ಭೌತಿಕ ವಸ್ತುಗಳಿಂದ ಮಾಡಲ್ಪಟ್ಟದ್ದು ದೇವರ ಜ್ಞಾನಕ್ಕಾಗಿ ಮತ್ತು ಬಲಕ್ಕಾಗಿ ಹಿನ್ನೆಲೆಯನ್ನು ಒದಗಿಸುತ್ತದೆ.

ದೇವರ ವಿಶಾಲವಾದ ಕೈಕೆಲಸದಲ್ಲಿ ಈ ನಮ್ಮ ನಿವಾಸಸ್ಥಾನವು "ಭೂಮಿ" ಎಂದು ಕರೆಯಲ್ಪಡುವ ಚಿಕ್ಕ ಗ್ರಹವಾಗಿದೆ. ಅಳತೆ ಮಾಡಲಾಗದ ವಿಶಾಲದಲ್ಲಿಯ ಅಗಣಿತ ನಕ್ಷತ್ರಗಳ ಸೌರವ್ಯೂಹದಲ್ಲಿ ಒಂದಾಗಿದೆ. ದೇವರ ಸ್ವರೂಪದಲ್ಲಿಯ ಮಾನವರಗಾಗಿಯೇ ಯೋಗ್ಯ ಸ್ಥಳವಾಗಿ ದೇವರಿಂದ ಭೂಮಿಯು ಸಿದ್ಧಪಡಿಸಲ್ಪಟ್ಟಿದೆ.

ಈ ದೈವಿಕ/ಮಾನವ ಸಂಬಂಧವು ಮಾನವ ಚರಿತ್ರೆಗಾಗಿ ದೇವರ ಕಾಳಜಿ ಮತ್ತು ಆತನ ಒಳಗೊಳ್ಳುವಿಕೆಗಾಗಿ ತಳಹದಿಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಹಾಗಿದ್ದರೂ ನಮ್ಮೊಂದಿಗಿನ ಆತನ ನಿಕಟ ಸಂಬಂಧದ ರೀತಿ ಮತ್ತು ವಿಸ್ತರಣೆಯು, ಅದಕ್ಕಾಗಿ ನಮ್ಮ ಬೈಬಲಿನಲ್ಲಿ ಅದ್ವಿತೀಯವಾದ ದಾಖಲೆಗಾಗಿ ಅಲ್ಲದಿದ್ದರೆ ಕಲ್ಪಿಸಲಾಗುತ್ತಿರಲಿಲ್ಲ. ಪರಿಶುದ್ಧ ಬರಹಗಳಿಂದ ಮಾನವನ ಸೃಷ್ಟಿಯಲ್ಲಿ ತಂದೆಯಾದ ದೇವರು, ಕುಮಾರನಾದ ದೇವರು, ಆತ್ಮನಾದ ದೇವರು ಎಲ್ಲರೂ ಕಾರ್ಯತತ್ಪರರಾಗಿದ್ದರು. ಅವಿಧೇಯತೆಯ ಕಾರಣದಿಂದ ದೇವರಿಗೆ ಯೋಗ್ಯನಾಗಿ ಸಂಬಂಧಿಸಿರುವದರಲ್ಲಿ ಮಾನವನು ಸೋತು ಹೋದಾಗ ದೈವತ್ವಕ್ಕೂ ಮಾನವತ್ವಕ್ಕೂ ಮಧ್ಯದಲ್ಲಿ ಬೇರ್ಪಡುವಿಕೆ ಯಾಗುವದನ್ನು ತಂದಿದೆ ಎಂದು ಪರಿಶುದ್ಧ ಬರಹದಲ್ಲಿ ಕಂಡು ಬರುವುದು.

ದೇವರಿಗೂ ನಮಗೂ ಮಧ್ಯದಲ್ಲಿಯ ಬೇರ್ಪಡುವಿಕೆಯ ನಮ್ಮ ಸ್ವಂತ - ಪ್ರಯತ್ನಗಳಿಂದ ಒಂದುಗೂಡಿಸಲ್ಪಡಲಾಗುವದಿಲ್ಲ. ದೇವರು ತನ್ನ ಶುದ್ಧ ಸ್ವಭಾವದ ಕಾರಣದಿಂದ ನಮ್ಮ ಕಳಂಕವುಳ್ಳ ಪಾಪಭರಿತ ಸ್ಥಿತಿಯಲ್ಲಿ ನಮ್ಮನ್ನು ಸ್ವೀಕರಿಸಲಾರನು. ಸಂಧಾನಕ್ಕಾಗಿ, ಎಂದಾದರೂ ಸಾಧ್ಯವಾಗಬೇಕಾದರೆ, ದೇವರು ಮೂರು ಸ್ಪಷ್ಟವಾದ ಮಾರ್ಗಗಳಲ್ಲಿ ಮೊದಲು ಹೆಜ್ಜೆ ಇಡಬೇಕಾಗುತ್ತದೆ. ಮೊದಲನೆಯದು, ಮಾನವನಿಗೂ ತನಗೂ ಮಧ್ಯದಲ್ಲಿಯ ಕಾಲುವೆಯ ಮೇಲೆ ತಾನೇ ಸೇತುವೆ ಕಟ್ಟಬೇಕು. ಎರಡನೆಯದು ಸೇತುವೆಯನ್ನು ದಾಟಿ ಆತನ ಬಳಿಗೆ ಹೋಗಲಿಕ್ಕೆ ನಾವು ಅರ್ಹರಾಗುವಂತೆ ಸಾಧನೆಗಳನ್ನು ಆತನು ಒದಗಿಸಬೇಕು. ಮೂರನೆಯದು, ದಾಟಿಹೋಗುವಿಕೆಯನ್ನು ಯಶಸ್ವಿಗೊಳಿಸುವದಕ್ಕಾಗಿ ನಮ್ಮನ್ನು ಶಕ್ತರನ್ನಾಗಿ ಮಾಡಲು ಆತನು ನಮ್ಮ ಬಲವನ್ನೂ, ಆಂತರಿಕ ದೃಷ್ಟಿಯನ್ನೂ, ಅರ್ಹತೆಗಳನ್ನೂ ಹಾಗೂ ಮಾರ್ಗದರ್ಶನವನ್ನೂ ಸತತವಾಗಿ ಒದಗಿಸಬೇಕು.

ನಮ್ಮ ಪರವಾಗಿ ದೇವರ "ವೈಯಕ್ತಿಕ" ಒಳಗೊಳ್ಳುವಿಕೆಯು ಯೇಸು ಕ್ರಿಸ್ತನ ವ್ಯಕ್ತಿತ್ವದಲ್ಲಿ ಬಂದಿತು. ಆತನ ರಕ್ತವು ನಮಗೂ ದೇವರಿಗೂ ಮಧ್ಯದಲ್ಲಿಯ ಅಂತರಕ್ಕೆ ಸೇತುವೆ ಕೊಟ್ಟಿತು (ಎಫೆಸ 2:12, 13; ಕೊಲೊಸ್ಸೆ 1:19-22). ಈ ಅಂತ್ಯಕ್ಕೆ ದೇವರು

ಮನುಷ್ಯನಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು (ಯೋಹಾನ 1:14). ನರಾವತಾರ ವೆತ್ತಿದ ದೇವರಾದ ಯೇಸುವು - ದೇವರು ಮತ್ತು ಮಾನವನು ಎರಡೂ ಆದಾತನು - ಭೂಲೋಕದಲ್ಲಿ ಇದ್ದಾಗ ತನ್ನ ದೈವತ್ವವನ್ನು ಹೇಗೆ ಪ್ರತಿಬಿಂಬಿಸಿದನು ಎಂಬುದನ್ನು ಯೋಚಿಸೋಣ.

© 2009 Truth for Today